ಕಟ್ಟಕಡೆಯ ಬಾರಿಗೆ ತಾನು ಹುಬ್ಬಳ್ಳಿಯ ನೆಲದಲ್ಲಿ ನಿಂತಿದ್ದೇನೆ ಎಂದು ನಾಗರಾಜನಿಗೆ ಅನಿಸಿತು. ಕರುಳನ್ನು ಕತ್ತರಿಸಿ ಹೊರಟಿದ್ದೇನೆ. ಇದನ್ನು ತಾನು ಯಾವಾಗಲೋ ಮಾಡಬೇಕಿತ್ತು. ತಡವಾಗಿ ಮಾಡುತ್ತಿದ್ದೇನೆ ಅಷ್ಟೆ. ಆಘಾತಕ್ಕೊಳಗಾಗಿದ್ದ ಮನಸ್ಸನ್ನು ಸ್ಥಿಮಿತಕ್ಕೆ ತರಲು ಆತ ಯತ್ನಿಸಿದ. ನಿಜವಾಗಿಯೂ ಕರುಳನ್ನು ತಾನು ಕತ್ತರಿಸಿದೆನೆ? ಅಥವಾ ತುಂಬುಕರುಳಿನ ಸೋದರಮಾವ ಅದನ್ನು ಕ್ರೂರವಾಗಿ ಬಗೆದನೆ? ಸಂಬಂಧಗಳನ್ನು ಯಾರು ಹರಿದು ಹಾಕಿದರು? ತಾನೋ ಅಥವಾ ಅವರೋ? ಆಸ್ತಿಗಾಗಿ ಅವರು ಹೊಂಚುಹಾಕುತ್ತಿಲ್ಲವೆ? ಹಿಂದೆ ತಾಯಿಗೆ ಮಣ್ಣು ಕೊಟ್ಟು ಹೊರಡುವಾಗಲೂ ತನಗೆ ಇಷ್ಟು ತಾಪವೆನಿಸಿರಲಿಲ್ಲ. ಅಪಾರ ವಾತ್ಸಲ್ಯ ತೋರಿಸುತ್ತಿದ್ದ ತಾಯಿ ಕೊನೆಕೊನೆಗೆ ತನ್ನೊಂದಿಗೆ ಮಾತು ಬಿಟ್ಟಳು. ತನ್ನ ಹೆಂಡತಿ ಹೊರಗಿನವಳೆಂದು ಹಲವು ಮಂದಿ ಹಂಗಿಸಿದಾಗಲೂ ತಾನು ಕಸಿವಿಸಿಗೊಳ್ಳಲಿಲ್ಲ. ಆವಾಗಲೆ ತಾನು ಸಿಡಿದೇಳಬೇಕಿತ್ತು. ಒಂದು ಬೈಗುಳ ಬೈದು ಸುಮ್ಮನಾಗುತ್ತಾರೆ, ಎರಡು ಬೈದು ಸುಮ್ಮನಾಗುತ್ತಾರೆ, ಒಂದು ಸಲ ಉದಾಸೀನ ಮಾಡುತ್ತಾರೆ, ಇನ್ನೊಂದು ಸಲ ಮಾಡುತ್ತಾರೆ ಎಂದು ತಾನು ಅಲಕ್ಷಿಸುತ್ತ ಬಂದದ್ದು ತಪ್ಪಾಯಿತೆಂದು ಕಾಣುತ್ತದೆ. ನಾಗರಾಜನೆಂದೂ ಊಹಿಸದ ಸಂಗತಿಯೊಂದು ಹೀಗೆ ಹಠಾತ್ತನೆ ಘಟಿಸಿ ಅವನ ಎದೆಯೊಳಗೀಗ ಉಲ್ಕೆಯೊಂದು ಉರಿಯುತ್ತಿತ್ತು. ತನ್ನನ್ನು ಹೊರದಬ್ಬುವ ಈ ಕೆಲಸ ಏಕಾಏಕಿ ನಡೆದಿರಲಿಕ್ಕಿಲ್ಲ. ಸೋದರಮಾವ ಮತ್ತು ಅವನ ಮಕ್ಕಳು ಇದನ್ನೆಲ್ಲ ಬಹಳ ದಿನಗಳಿಂದಲೆ ಯೋಜಿಸಿರಬೇಕು. ಇಲ್ಲದಿದ್ದರೆ ಪುಂಖಾನುಪುಂಖವಾಗಿ ಅವರು ತನ್ನನ್ನು ಪ್ರಶ್ನಿಸುತ್ತಿದ್ದಾಗ ತಾನು ನಿರುತ್ತರನಾಗುತ್ತಿರಲಿಲ್ಲ. 'ನೀವು ಏನ ಬೇಕಾದ್ದ ಪ್ರಶ್ನೆ ಉತ್ತರ ರೆಡಿ ಮಾಡ್ಕೊಂಡು ಹೋದ್ರೂ ಅವರು ಅದನ್ನ ಒಂದ್ ಮಿನಿಟನ್ಯಾಗ ಬುರ್ಬುಶ್ ಮಾಡ್ತಾರು... ಇದು ನಿಮಗ ಗೊತ್ತಿರಲಿ...' ಹೆಂಡತಿ ದೀಪಾ ಹೇಳಿಕಳಿಸಿದ್ದಳು. ಅಷ್ಟಾದರೂ ಮಾವನ ಮುಂದೆ ತಾನು ಏನೂ ಮಾತನಾಡಲಾಗಲಿಲ್ಲ. ಒಂದು ರೀತಿಯಲ್ಲಿ ಅವರ ಮುಂದೆ ತಾನು ವಿಸ್ಮೃತಿಗೆ ಒಳಗಾದೆ. ಊರಿಗೆ ಒಬ್ಬರೆ ಹೋಗಬೇಡಿರೆಂದು ಹೆಂಡತಿ ಕೈಯಲ್ಲಿ ಕಡ್ಡಿಕೊಟ್ಟು ಹೇಳಿದ್ದಳು. ಅವಳ ಮಾತನ್ನು ತಾನು ಧಿಕ್ಕರಿಸಿ ಬಂದೆ. ಮಾವ ತನ್ನ ಮಾತನ್ನು ಅದ್ಹೇಗೆ ಮೀರುತ್ತಾನೆ ಎಂದು ತಾನು ತಿಳಿದಿದ್ದು ಎಷ್ಟು ತಪ್ಪಾಯಿತು! ಹಗ್ಗವೆಂದು ಹಿಡಿದದ್ದು ಹಾವಾಗಿ ಹರಿಯುತ್ತಿದೆ.

ಶಂಕರಪ್ಪಮಾವ ಆಡಿದ ಮಾತುಗಳು ಕ್ಷಣಕ್ಷಣಕ್ಕೂ ಅವನನ್ನು ಕುಗ್ಗಿಸುತ್ತಿದ್ದವು: 'ಅಲಲಲಾ, ನಾಗಣ್ಣ, ಇತ್ತಿತ್ತಲಾಗಿ ನೀನೂ ಬಾಳ ಮಾತಾಡಾಕ ಕಲತೀದಿ... ಅಡ್ಡಿಯಿಲ್ಲ. ಅದೂ ನನಗನss ತಿರುಗಿ ಮಾತಾಡುವಷ್ಟು ಬೆಳದಬಿಟ್ಟಿ... ಅಲ್ಲ? ನಿನ್ನ ದೊಡ್ಡಾಂವನ ಮಾಡಿದೆವಲ್ಲೊ ಮಾರಾಯ, ಅದರ ಪ್ರತಿಫಲ ಇದು. ಇರಲಿ ಬಿಡು... ಈಗೇನು ಜಗಳಾಡಿದೀವಲ್ಲ, ಇದss ಕೊನಿ ಅಂತ ತಿಳ್ಯಾಕ ಹೋಗಬ್ಯಾಡ. ಈಗ ಹೋಗು, ಮತ್ತ ಯಾವಾಗಾದ್ರೂ ಬಾ. ನಿನ್ನ ತಲಿ ಕೆಟ್ಟೈತೆಂತ ಕಾಣ್ತದ. ಯಾವಾಗ ಬರ್ತಿ ಅನ್ನೋದನ್ನ ಮೊದಲ ಹೇಳು. ಹಿಂಗ ಅವಸರಲೇ ಬರಾಕ ಹೋಗಬ್ಯಾಡ. ಎರಡ ದಿನಾ ರಜಾ ಹಾಕ್ಕೊಂಡು ಆರಾಮಸೇ ಬಾ. ನಿನ್ನ ಕಡೆ ಹಿರ್‍ಯಾರಿದ್ರ ಕರಕೊಂಡ ಬಾ. ನಿನ್ನ ಹೆಂಡತಿನೂ ಕರಕೊಂಡ ಬಾ. ಆಕೀಗೂ ಪ್ರಪಂಚ ಗೊತ್ತಾಗಲಿ. ನಿನಗ ತಿಳಿಲಾರದ್ದು ಆಕಿಗಾದರೂ ತಿಳಿದೀತು. ಬೇಕಂದ್ರ ನಿನ್ನ ಆಫೀಸಿನವರನ್ನೂ ಕರಕೊಂಡು ಬಾರೇನಪಾ... ನಿನ್ನss ಪಾಲಿನ ಆಸ್ತಿ ನಿನಗ ಕೊಡಾಕ ನಂದೇನೂ ತಕರಾರಿಲ್ಲ. ಆದರ ಊರಮಂದಿ ಏನ ಕೇಳ್ತಾರು ಗೊತ್ತೈತೇನು? 'ಆ ನಾಗ್ಯಾ ಇಲ್ಲೇನು ದುಡಿದಾನಂತ ಆಸ್ತಿ ಕೇಳ್ತಾನು... ನೌಕರಿಯ ಹರಾಮಿ ದುಡ್ಡು ಎಣಿಸ್ತಾನಲ್ಲ, ಅದಕ್ಕ ಸೊಕ್ಕ ಬಂದೇತಿ...' ಅಂತಾರ